# ಕೇದಾರಕಂಠ

## ಹಿಮಾಲಯದ ಮಡಿಲಿನಲ್ಲಿ ಚಾರಣ



ಕೇದಾರಕಂಠ ಭಾರತದ ಪ್ರಸಿದ್ಧ ಚಾರಣ ತಾಣಗಳಲ್ಲೊಂದು. ಉತ್ತರಾಖಂಡದಲ್ಲಿನ ಈ ಜನಪ್ರಿಯ ಚಾರಣ ಶಿಖರ ಮೈಮನಗಳಿಗೆ ದಣಿವು ತರಿಸಿದರೂ, ಆ ದಣಿವಿನಲ್ಲೇ ಜೀವನೋತ್ಸಾಹದ ಶಕ್ತಿಮದ್ದನ್ನೂ ಕರುಣಿಸುತ್ತದೆ. ಪ್ರಕೃತಿ ಸೌಂದರ್ಯವನ್ನು ನಡೆದು ನೋಡುವಾಗ, ಆವರೆಗೆ ಸುಪ್ತವಾಗಿದ್ದ ಬದುಕಿನ ಅನೇಕ ಸತ್ಯಗಳು ಧುತ್ತೆಂದು ಸಾಕ್ಷಾತ್ಕಾರಗೊಳ್ಳುತ್ತವೆ. ಕೇದಾರಕಂಠದ ಈ ಚಾರಣ ಕಥನ, ಹಿಮದ ಮಡಿಲಿನಲ್ಲಿ ಓದುಗರನ್ನು ಕೈಹಿಡಿದು ನಡೆಸುತ್ತ, ಎದೆಯಲ್ಲಿ ಹಿಮದ ಚಿತ್ತಾರ ಮೂಡಿಸುವಂತಿದೆ.

■ ಎಸ್. ನಟರಾಜ ಬೂದಾಳು